**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 440-2025**

**ಸಿ.ಡಬ್ಲ್ಯೂ -1, ಪಿ.ಡಬ್ಲ್ಯೂ -1**

| | | |
|---|---|---|
| ಸಾಕ್ಷಿದಾರರ ಹೆಸರು | : | ಲೋಕಮ್ಮ |
| ಗಂಡನ ಹೆಸರು | : | ಮಸಣಪ್ಪ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಸೂರನಗದ್ದೆ ಗ್ರಾಮ, ಸಾಗರ ತಾಲ್ಲೂಕು. |

**ಪ್ರಮಾಣೀಕರಿಸಿದ ದಿನಾಂಕ :09.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸ 2 ನನ್ನ ಮಗ. ಅವರು ಈಗ ಮೃತಪಟ್ಟಿರುತ್ತಾರೆ. ಚಾಸ 3 ರವರು ಪರಿಚಯವಿದೆ, ಅವರು ನಮ್ಮ ಊರಿನವರೇ. ಆರೋಪಿ ನನ್ನ ಮಗ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಜಗಳವಾಗಿರುವುದಿಲ್ಲ. ಆರೋಪಿ ನನಗೆ ಕಳೆ ಹೊಡೆಯುವ ಮಿಷಿನ್ ಬ್ಲೇಡ್ ನಿಂದ ಹಲ್ಲೆ ಮಾಡಿರುವುದಿಲ್ಲ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಕಡತದಿಂದ ಒಂದು ದಾಖಲೆಯನ್ನು ತೆಗೆದು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಿರ್ಯಾದಾಗಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪಿರ್ಯಾದಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ- ಸ.ಸ.ಅ. ರವರಿಂದಃ-

1. ದಿಃ18.12.2024 ರಂದು ರಾತ್ರಿ 9.50 ಗಂಟೆಗೆ ನಮ್ಮ ವಾಸದ ಮನೆಯ ಮಧ್ಯದ ಹಾಲ್ ನಲ್ಲಿ ಹುಷಾರಿಲ್ಲದೇ ಮಲಗಿದ್ದಾಗ ಆರೋಪಿಯು ನನಗೆ ಊಟ ಹಾಕು ಬಾ ಎಂದು ಕರೆದಿದ್ದು, ನಾನು ನನಗೆ ಏಳಲು ಆಗುವುದಿಲ್ಲ ಎಂದು ಹೇಳಿದ್ದಕ್ಕೆ ಆರೋಪಿ ಊಟ ಹಾಕಲು ಆಗುವುದಿಲ್ಲವಾ ಎಂದು ಕೂಗಾಡುತ್ತಾ ನನ್ನೊಂದಿಗೆ ಗಲಾಟೆಗೆ ಬಂದು ಮನೆಯ ಒಳಗೆ ಇದ್ದ ಕಳೆ ಹೊಡೆಯುವ ಮಿಷನ್

ಬ್ಲೇಡ್ ನಿಂದ ನನ್ನ ಎಡ ತುಟಿಯ ಮೇಲ್ಭಾಗಕ್ಕೆ ಹೊಡೆದು ಗಾಯ ಆಗುವಂತೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನೊಂದಿಗೆ ರಾಜಿ ಆಗಿದ್ದೇನೆ ಎಂದರೆ ಸರಿ. ರಾಜಿ ಆಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.